

ತನ್ನ ಸುತ್ತಲಿನ ಹಲವು ಪ್ರತಿಮೆಗಳನ್ನು ಒಡೆಯುತ್ತ ತಾನೇ ಒಡಕು ಪ್ರತಿಮೆಯಾಗಿ ಹೋದವಳು ಲಿವಿಯಾ



ಆಗಸ್ಟಸ್‌ನ ಪ್ರತಿಮೆ

ಗಡೀಪಾರು ಮಾಡುತ್ತಾನೆ. ಇಷ್ಟಕ್ಕೂ ಲಿವಿಯಾ ಸುಮ್ಮನೆ ಕೂರುವುದಿಲ್ಲ.

ಈ ನಡುವೆ ಜೂಲಿಯಾಳ ಎರಡನೇ ಗಂಡನಿಗೆ ಹುಟ್ಟಿದ ಮಗ ಗಯಸ್‌ನನ್ನು ಸಾಮ್ರಾಟನನ್ನಾಗಿ ಮಾಡುವ ಇಚ್ಛೆಯಿಂದ ಆಗಸ್ಟಸ್ ಆತನನ್ನು ದತ್ತು ಸ್ವೀಕರಿಸಿ ಅರ್ಮೇನಿಯಾ ಪ್ರಾಂತ್ಯ ನೀಡುತ್ತಾನೆ. ಆರ್ಮೇನಿಯಾ ಯುದ್ಧದಲ್ಲಿ ಗಾಯಗೊಂಡಿದ್ದ ಗಯಸ್‌ನಿಗೆ ಲಿವಿಯಾ ವಿಷವಿಕ್ಕಿ ಕೊಲ್ಲುತ್ತಾಳೆ.

ಅನಂತರ ಲಿವಿಯಾಳ ಮುಂದಿನ ಗುರಿ ಜೂಲಿಯಾಳ ಇನ್ನೊಬ್ಬ ಮಗ ಲೂಸಿಯಸ್ ಕಡೆ ತಿರುಗುತ್ತದೆ. ಆಗಸ್ಟಸ್‌ಗೆ ಅವನ ಬಗ್ಗೆ ತಪ್ಪು ಕಲ್ಪನೆ ಬರುವ ಹಾಗೆ ಮಾಡಿ ಲೂಸಿಯಸ್‌ನನ್ನು ಸಾಮ್ರಾಟ ಸ್ಥಾನಕ್ಕೆ ಅನರ್ಹನಾಗಿಸುವಲ್ಲಿ ಸಫಲವಾಗುತ್ತಾಳೆ. ಅನಂತರ ಆಸ್ಥಾನದ ಸೇವಕನ ಮೂಲಕ ಲೂಸಿಯಸ್‌ನನ್ನು ದೋಣಿ ಅಪಘಾತದಲ್ಲಿ ಹತ್ಯೆ ಮಾಡಿಸುತ್ತಾಳೆ. ಇಲ್ಲಿಗೂ ಅವಳ ರಕ್ತದಾಹ ಕೊನೆಯಾಗುವುದಿಲ್ಲ. ಜೂಲಿಯಾಳ ಮತ್ತೊಬ್ಬ ಮಗ ಪೋಸ್ಚ್ಯುಮಸ್ ಇನ್ನೂ ಬದುಕಿರುತ್ತಾನೆ!

ಪೋಸ್ಚ್ಯುಮಸ್‌ನನ್ನೂ ಆಗಸ್ಟಸ್ ಉತ್ತರಾಧಿಕಾರಿಯಾಗಿ ಮಾಡಲು ದತ್ತು ಪಡೆಯುತ್ತಾನೆ. ಪೋಸ್ಚ್ಯುಮಸ್‌ನಿಗೆ ಆಗಲೇ ಮದುವೆಯಾಗಿರುತ್ತದೆ. ಆತ ಲಿವಿಯಾಳ ಮೊಮ್ಮಗಳ ಜೊತೆ (ಲಿವಿಯಾಳ ಎರಡನೇ ಮಗ ಡ್ರುಸಸ್‌ನ ಮಗಳಾದ ಲಿವಿಲ್ಲಾ ಜೊತೆ) ಸಂಬಂಧ ಹೊಂದಿರುತ್ತಾನೆ. ಲಿವಿಲ್ಲಾ ಈಗಾಗಲೇ ತನ್ನ ದೊಡ್ಡಪ್ಪ ಟಿಬೆರಸ್‌ನ ಮಗನನ್ನು ಮದುವೆ ಆಗಿರುತ್ತಾಳೆ. ಲಿವಿಯಾಳಿಗೆ ತನ್ನ ಮಗ ಟಿಬೆರಸ್‌ನಿಗೆ ಪಟ್ಟ ಕಟ್ಟುವ ಆಸೆಯೊಂದೇ ಅಲ್ಲದೆ, ಆತನ ನಂತರ ಆತ ಮತ್ತು ಜೂಲಿಯಾಗೆ ಹುಟ್ಟಿದ ಮಗನಿಗೂ ಪಟ್ಟ ಕಟ್ಟುವ ಮುಂದಾಲೋಚನೆ ಇರುತ್ತದೆ. ಒಂದು ಕಲ್ಲು ಎರಡು ಹಕ್ಕಿ ಎಂದು ಎಣಿಸಿದ ಲಿವಿಯಾ ತನ್ನ ಮೊಮ್ಮಗಳ ಜೊತೆಗೆ ಸೇರಿಕೊಂಡು ಪೋಸ್ಚ್ಯುಮಸ್ ಮೇಲೆ ಅತ್ಯಾಚಾರದ ಆರೋಪ ಹೊರಿಸಿ ಗಡೀಪಾರು ಮಾಡಲು ಸಫಲಳಾಗುತ್ತಾಳೆ. ಗಡೀಪಾರು ಆಗಿರುವ ಪೋಸ್ಚ್ಯುಮಸ್‌ನನ್ನು ಲಿವಿಯಾ ಕೊಲೆ ಮಾಡಿಸುತ್ತಾಳೆ. ಈಗ ಆಗಸ್ಟಸ್ ಬೇರೆ ದಾರಿ ಕಾಣದೆ ಟಿಬೆರಸ್‌ನನ್ನು ಉತ್ತರಾಧಿಕಾರಿ ಎಂದು ದತ್ತು ಸ್ವೀಕರಿಸುತ್ತಾನೆ.

ಆದರೆ ಲಿವಿಯಾಳ ಹತ್ಯಾವ್ಯಸನ ಇಲ್ಲಿಗೇ ಮುಗಿಯುವುದಿಲ್ಲ. ಕೊನೆಯುಸಿರಿರುವವರೆಗೂ ತನ್ನನ್ನು ಪ್ರೀತಿಸಿದ ಸಾಮ್ರಾಟ ಆಗಸ್ಟಸ್‌ನನ್ನೂ ಲಿವಿಯಾ, ಅಂಜೂರದ ಹಣ್ಣಿನಲ್ಲಿ ವಿಷವಿಕ್ಕಿ ಕೊಂದಳು ಎಂದು ಇತಿಹಾಸದಲ್ಲಿ ದಾಖಲಾಗಿದೆ. ಆದರೆ ಆಧುನಿಕ ಇತಿಹಾಸಕಾರರು ಆಗಸ್ಟಸ್‌ನದ್ದು ವಯೋಸಹಜ ಸಾವು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಷ್ಟೆಲ್ಲ ಮೆರೆದ ಲಿವಿಯಾಳ ಅಂತ್ಯ ಮಾತ್ರ ಗೌರವಯುತವಾಗಿ ಆಗಲಿಲ್ಲ. ತಾನು ಹತ್ತು ಹಲವು ಹತ್ಯೆಗಳನ್ನು ಎಸಗಿ ಪಟ್ಟಕ್ಕೆ ಕೂಡಿಸಿದ ಮೋಹದ ಮಗ ಟಿಬೆರಸ್ ಆಡಳಿತಕ್ಕಿಂತ ಭ್ರಷ್ಟಾಚಾರವನ್ನೇ ಹೆಚ್ಚು ಮಾಡುವುದನ್ನು ಅವಳು ಕಾಣಬೇಕಾಯಿತು. ಬದುಕಿನುದ್ದಕ್ಕೂ ಎಸಗಿದ ಪಾಪಕೃತ್ಯಗಳು ಅವಳ ಕೊನೆಗಾಲದಲ್ಲಿ ಕಾಡಲು ಶುರುವಾಗಿತ್ತು. ಸಾಮ್ರಾಜ್ಯದ ಕಣ್ಣಿಗೇ ದೂಳು ಸೋಕಿಸಿದವಳು ಆತ್ಮಸಾಕ್ಷಿಯ ತಪರಾಕಿಗೆ ತತ್ತರಿಸಿಹೋಗಿದ್ದಳು. ಪಟ್ಟದಲ್ಲಿರುವ ಮಗನ ಜೊತೆಗೂ ಅವಳ ಸಂಬಂಧ ಹಳಸಲು ಶುರುವಾಗಿತ್ತು. ಕೊನೆಗವಳು ತೀರಿಕೊಂಡಾಗ, ಅವಳ ಮುದ್ದಿನ ಮಗ ಟಿಬೆರಸ್ ಅವಳ ಕಳೆಬರವನ್ನು ನೋಡಲೂ ಬರಲಿಲ್ಲ.

ಬಹುಶಃ ಆ ಸಮಯದಲ್ಲಿ ಅವಳಿಗೆ ಅಧಿಕಾರದ ಕುರಿತು ಅವಳೇ ಹೇಳಿದ ವ್ಯಾಖ್ಯಾನವನ್ನು ನೆನಪಿಸಿದರೆ ಅದನ್ನವಳು, 'ದ ಫಸ್ಟ್ ರೂಲ್ ಆಫ್ ಪವರ್ ಈಸ್ ಸರ್ವ್' ಎಂದು ತಿದ್ದುತ್ತಿದ್ದಳೋ ಏನೋ?

ಪ್ರತಿಕ್ರಿಯಿಸಿ: feedback@sudha.co.in